ಅಷ್ಟು ಹೊತ್ತು ಮಾತನಾಡಿದ ಸುರಭಿ ಒಮ್ಮೆಯೂ ಅವಳನ್ನು 'ಅಮ್ಮಾ' ಎಂದು ಕರೆದಿರಲಿಲ್ಲ. ಅವಳ ಮಾತುಗಳು, ಅವಳ ಧ್ವನಿ, ಅವಳ ಕಿವಿಯಲ್ಲಿ ಗುಂಯ್‌ಗುಟ್ಟಿದವು. ಅವಳಾಡಿದ ಮಾತುಗಳಲ್ಲಿ ಒಂದಂಶವೂ ಸುಳ್ಳಿರಲಿಲ್ಲ. ಪುಂಗಿಯ ನಾದಕ್ಕೆ ಒಳಗಾದ ಹಾವಿನಂತೆ ಅವಳು ರಾಮ್‌ಪ್ರಸಾದ್ ಜೊತೆ ಹೋಗಿದ್ದಳು. ಆಗವಳಿಗೆ ಗಂಡನ ಗೌರವ, ಮಕ್ಕಳ ಭವಿಷ್ಯ, ಮನೆತನದ ಗೌರವ ಯಾವುದೂ ನೆನಪಾಗಿರಲಿಲ್ಲ. ತನ್ನ ಸುಖವೇ ಹೆಚ್ಚು ಎನ್ನಿಸಿತ್ತು.

ತಾನು ಹೋದಮೇಲೆ ಗಂಡ ಅದೆಷ್ಟು ಸಂಕಟ ಅನುಭವಿಸಿರಬಹುದು! ತಂದೆ ತಾಯಿ, ಅತ್ತೆ ಮಾವ ಅದೆಷ್ಟು ನೊಂದುಕೊಂಡಿರಬಹುದು! ಮಕ್ಕಳು ತನಗಾಗಿ 'ಅಮ್ಮಾ, ಅಮ್ಮಾ' ಎಂದು ಅತ್ತಿರಬಹುದಲ್ಲವೆ?

'ಓಡಿಹೋದವಳ ಮಗಳು' ಎಂಬ ಹಣೆಪಟ್ಟಿ ಸುರಭಿಯ ಭವಿಷ್ಯಕ್ಕೆ ಕಪ್ಪು ಚುಕ್ಕಿ ಇಟ್ಟಿರಬಹುದು. ಸುರಭಿ ಚಿಕ್ಕವಳಲ್ಲ. ಅಜ್ಜಿಯ ಕೈಕೆಳಗೆ ಬೆಳೆದಿರುವ ಅವಳು ಬೇರೆ ರೀತಿ ಯೋಚಿಸಲು ಸಾಧ್ಯವಿಲ್ಲ. ತಮಗಾಗಿ ಜೀವ ತೇಯ್ದಿರುವ ಅಜ್ಜಿಯ ಆಸೆ ಪೂರೈಸಲು ಅವಳು ಮದುವೆಯಾಗಲು ಸಿದ್ಧಳಿರಬಹುದು. ತಮ್ಮ ತಾಯಿಯ ಬಗ್ಗೆ ಬರೀ ಆಕ್ಷೇಪಣೆಗಳನ್ನೇ ಕೇಳಿರುವ ಮಕ್ಕಳು ಬೇರೆ ರೀತಿ ವರ್ತಿಸಲು ಸಾಧ್ಯವಿಲ್ಲ.

ಭುವನಾ ಹೋಗಿ ಕಾಫಿ ಬೆರೆಸಿ ತಂದು ಕುಡಿದಳು. ಅವಳ ಮೆದುಳು ಪುನಃ ಕಾರ್ಯಾನೆಯಾಯಿತು. 'ನಾನು ಮಾಡಿರುವುದು ಅಕ್ಷಮ್ಯ ಅಪರಾಧ ನಿಜ. ಒಂದು ಸಾಂಪ್ರದಾಯಿಕ ಕುಟುಂಬದಲ್ಲಿ ಬೆಳೆದು, ಅಂತಹುದೇ ಕುಟುಂಬದ ಸೊಸೆಯಾಗಿದ್ದ ನಾನು ಪ್ರೀತಿಸುವ ಪತಿ, ಮುದ್ದುಮಕ್ಕಳನ್ನು ಬಿಟ್ಟು ರಾಮಪ್ರಸಾದ್ ಹಿಂದೆ ಹೋಗಿದ್ದು ತಪ್ಪು. ಆದರೆ, ಮನಸ್ಸು ಮಾಡಿದರೆ ಗಂಡ ತನ್ನನ್ನು ಕ್ಷಮಿಸಬಹುದಲ್ಲವೆ?'

ತಕ್ಷಣ ಭುವನಾಳಿಗೆ ಮಂಗಳೂರಿನ ಡಾ. ಆನಂದಿಯ ಮಾತುಗಳು ನೆನಪಾದವು. ಡಾ. ಆನಂದಿ ಅವಳನ್ನು ತಮ್ಮ ಮನೆಯಲ್ಲಿಟ್ಟುಕೊಂಡು, ಅವಳು ಬೆಂಗಳೂರು ತಲುಪಲು ಸಹಾಯ ಮಾಡಿದ್ದರು. ಅರವತ್ತು ವರ್ಷದ ಡಾ. ಆನಂದಿ ನೆಲೆತಪ್ಪಿದ ಹೆಣ್ಣುಮಕ್ಕಳಿಗೆ ತಾಯಿಯಂತಿದ್ದರು.

"ಭುವನಾ ನೀನು ಬೆಂಗಳೂರಿಗೆ ಹೋಗು. ನಿನ್ನ ಗಂಡನನ್ನು ಭೇಟಿ ಮಾಡು. ಆದರೆ, ಅವನು ನಿನ್ನ ತಪ್ಪನ್ನು ಕ್ಷಮಿಸಿ ನಿನ್ನನ್ನು ಪುನಃ ಮನೆಗೆ ಸೇರಿಸಿಕೊಳ್ತಾನೆ ಅನ್ನುವ ನಂಬಿಕೆ ನನಗಿಲ್ಲ."

"ಯಾಕೆ?"

"ಅವನು ಮಕ್ಕಳ ದೃಷ್ಟಿಯಿಂದ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಆ ಮಕ್ಕಳು ನಿನ್ನನ್ನು ಒಪ್ಪಿಕೊಳ್ಳಲು ಸಿದ್ಧರಾಗಿರಬೇಕಲ್ಲವಾ?"

"ನೀವು ಏನು ಹೇಳ್ತಿದ್ದೀರ ಡಾಕ್ಟರ್?"

"ನಿನ್ನ ಗಂಡ ನಿನ್ನನ್ನು ಒಪ್ಪಿ ಕರೆದುಕೊಂಡು ಹೋದರೆ ಸಂತೋಷ. ಇಲ್ಲದಿದ್ದರೆ ಒಂದು ನಂಬರ್ ಕೊಟ್ಟಿರ್ತೀನಿ. ಅಲ್ಲಿಗೆ ಫೋನ್ ಮಾಡು."

"ಯಾರ ನಂಬರ್ ಅದು?"

"ನನ್ನ ಫ್ರೆಂಡ್ ಒಬ್ಬರು ಅನಾಥಾಲಯ ನಡೆಸ್ತಿದ್ದಾರೆ. ಮಕ್ಕಳನ್ನು ನೋಡಿಕೊಳ್ಳಲು ಓದಿರುವ ಹೆಂಗಸು ಬೇಕೂಂತ ಕೇಳಿದ್ರು. ನಿನಗೆ ಅಲ್ಲಿ ಕೆಲಸ ಸಿಗತ್ತೆ. ಊಟ, ವಸತಿಯ ಸಮಸ್ಯೆ ಪರಿಹಾರವಾಗತ್ತೆ."

ಅವಳು ಎದ್ದು ಆ ನಂಬರ್ ಹುಡುಕಿದಳು. ಐದೂವರೆಯ ಹೊತ್ತಿಗೆ ಮಕ್ಕಳು ಸ್ಕೂಲ್‌ನಿಂದ ಬಂದರು. ದೊಡ್ಡವನು ಅರುಣ್ ಎಸ್.ಎಸ್.ಎಲ್.ಸಿ.ಯಲ್ಲಿದ್ದ. ಅವನ ತಂಗಿ ಅನಘಾ ಏಳನೇ ತರಗತಿಯಲ್ಲಿದ್ದಳು. ಅವರು ಕೈಕಾಲು ತೊಳೆದು ಬಟ್ಟೆಬದಲಾಯಿಸಿ ಬಂದ ಕೂಡಲೇ ಹಾರ್ಲಿಕ್ಸ್